## ಹುಲಿ ಕಳ್ಳತನ!

ನಂಜ ಮೃಗಾಲಯದಲ್ಲಿ ಕೆಲಸ ಮಾಡುತ್ತಿದ್ದ. ಒಮ್ಮೆ ಹುಲಿಯ ಬೋನಿಗೆ ಬೀಗ ಹಾಕುವುದನ್ನು ಮರೆತ. ಇದನ್ನು ಗಮನಿಸಿದ ಮೇಲಾಧಿಕಾರಿ ನಂಜನನ್ನು ಕರೆದು ಕರ್ತವ್ಯ ಲೋಪ ಎಸಗಿದ್ದಕ್ಕೆ ವಿಚಾರಣೆ ಮಾಡಿದರು. ಆಗ ನಂಜ ಹೇಳಿದ: 'ಅಯ್ಯೊ ಬಿಡಿ ಸಾರ್, ಹುಲಿಯನ್ನು ಕಳ್ಳತನ ಮಾಡೊ ಧೈರ್ಯ ಹಾರಿಗಿದೆ?'

**ವಿ. ಹೇಮಂತಕುಮಾರ್**



## ಅದೃಷ್ಟ

ಗುಂಡನ ಮನೆಗೆ ಅವನ ಅತ್ತೆ ಬಂದಿದ್ದರು. ಗುಂಡ ಅತ್ತೆಯನ್ನು ತನ್ನ ಮಾತಿನಿಂದ ಮೆಚ್ಚಿಸಬೇಕೆಂದು, 'ನಿಮ್ಮ ಮಗಳನ್ನು ನಾನು ಮದುವೆಯಾಗಿರೋದು ನನ್ನ ಅದೃಷ್ಟ' ಎಂದೆಲ್ಲ ಹಾಡಿ ಹೊಗಳಿದ. ಅವನ ಅತ್ತೆ ಅಂದಳು, 'ಏನು ಮಾಡೋದು ಹೇಳಿ, ನಮ್ಮ ಮಗಳ ಅದೃಷ್ಟ ಸರಿ ಇಲ್ಲ, ಅವಳಿಗೆ ಯೋಗ್ಯನಾಗಿರೊ ಗಂಡ ಸಿಗಲಿಲ್ಲ'.

**ಶಂಕರೇಗೌಡ ತುಂಬಕೆರೆ**



ಚಿತ್ರಗಳು: ಗಣೇಶ ಆಚಾರ್ಯ